# ವಿಧ ವಿಧ ಕೇಶಾಭರಣ; ಸೌಂದರ್ಯದ ಅನಾವರಣ



ಕೇಶಾಲಂಕಾರ ಮಾಡಿದಷ್ಟೇ ಕೇಶಾಭರಣವೂ ಫ್ಯಾಷನಬಲ್ ಆಗಿರುತ್ತದೆ. ಹಬ್ಬ ಹರಿದಿನಗಳಲ್ಲಿ, ಮದುವೆ ಮುಂಜಿಗಳಂತಹ ಸಮಾರಂಭಗಳಲ್ಲಿ ರೇಷ್ಮೆ ಸೀರೆ ಉಟ್ಟಾಗ ಸ್ಟೈಲಿಷ್ ಆಗಿರುವ ಕೇಶಾಭರಣ ತೊಟ್ಟುಕೊಂಡರೆ ಹೆಣ್ಣುಮಕ್ಕಳ ಅಲಂಕಾರಕ್ಕೆ ವಿಶೇಷ ಕಳೆ ಬರುತ್ತದೆ.

■ ಕವಿತಾ ವಿನು ಭಟ್ಟ
ಚಿತ್ರಗಳು: ವಿದ್ಯಾ ನವೀನ್

ಹೆಣ್ಣು ಮಕ್ಕಳಿಗೂ ಅಲಂಕಾರಕ್ಕೂ ಅವಿನಾಭಾವ ಅನುಬಂಧ. ತಮ್ಮನ್ನು ತಾವು ಅಲಂಕರಿಸಿಕೊಳ್ಳುವುದರಿಂದ ಅವರಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ. ಬಳೆ, ಸರ, ಸೊಂಟದ ಪಟ್ಟಿ, ಕಿವಿಯೋಲೆ, ಗೆಜ್ಜೆಗಳಂತೆಯೇ ತಲೆ ಕೂದಲಿನ ಅಲಂಕಾರಕ್ಕೆ ಅನುಕೂಲವಾದ ಕೇಶಾಭರಣಗಳು ನವ ವಧುವಿಗೆ ಮಾತ್ರ ಸೀಮಿತವಾಗಿದ್ದ ಕಾಲವೊಂದಿತ್ತು. ಆದರೀಗ ಮದುವೆಯಲ್ಲಿ ಮಾತ್ರವಲ್ಲದೆ ಸಣ್ಣಪುಟ್ಟ ಫಂಕ್ಷನ್, ಪಾರ್ಟಿ, ಹಬ್ಬಹರಿದಿನಗಳಲ್ಲಿಯೂ ಹೇರ್ ಸ್ಟೈಲ್ ಮತ್ತು ಹೇರ್ ಆ್ಯಕ್ಸೆಸರೀಸ್ ಟ್ರೆಂಡ್.

### ಬನ್ ಕವರ್

ಸೀರೆ ಉಟ್ಟು ಸಾಂಪ್ರದಾಯಿಕವಾಗಿ ತಯಾರಾದಾಗ ತಲೆಗೂದಲನ್ನು ಗಾಳಿಯಲ್ಲಿ ಹಾರಿಬಿಡುವುದಕ್ಕಿಂತ ತುರುಬು ಕಟ್ಟಿದರೆ ಚಂದ. ಈ ತುರುಬು ಅಥವಾ ಬನ್‌ಗೆ ನೆಟ್ಟೆಡ್ ಬನ್ ಕವರ್‌ಗಳ ಜಾಗದಲ್ಲಿ ಗೋಲ್ಡ್ ಪ್ಲೇಟೆಡ್ ಬನ್ ಕವರ್, ಆರ್ಟಿಫಿಶಿಯಲ್ ಮೊಗ್ಗಿನ ಮಾಲೆಗಳು ಅದ್ಭುತವಾಗಿ ಕಾಣುತ್ತವೆ. ಕ್ರೋಚೆಟ್, ಫ್ಯಾಬ್ರಿಕ್, ಲೇಸ್ ಬನ್ ಕವರ್‌ಗಳು ಆಧುನಿಕ ಮಹಿಳೆಯರ ಮನಗೆದ್ದಿವೆ. ತುರುಬನ್ನು ವಿಶೇಷವಾಗಿ ಅಲಂಕರಿಸಲು ವಿವಿಧ ಬಗೆಯ ಆಭರಣಗಳಿವೆ. ಪೆಂಡೆಂಟ್ ಮತ್ತು ಲೋಲಕ ಇರುವ ಜೂಡ ಪಿನ್ನುಗಳು ರಿಚ್ ಲುಕ್ ಕೊಡುತ್ತವೆ. ಮಾಡರ್ನ್ ಯುವತಿಯರಿಗಾಗಿಯೇ ಹೊಸ ಬಗೆಯ ಬನ್ ಕವರ್, ಜೂಡ ಪಿನ್ನುಗಳು, ವುಡನ್ ಸ್ಟಿಕ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ.

### ಟಯೆರಾ

ಮುತ್ತು, ಹರಳು, ಬೆಳ್ಳಿ ಬಂಗಾರದ ಬೀಡ್ಸ್‌ಗಳನ್ನು ಬಳಸಿ ಮಿಂಚಿನ ಬಳ್ಳಿಯಂತೇ ಕಾಣುವ ಈ ಹೇರ್ ಆ್ಯಕ್ಸೆಸರೀಸ್ ಕೂದಲಿನ ಸೌಂದರ್ಯ ವೃದ್ಧಿಸುತ್ತವೆ. ಮದುಮಗಳಿಗೆ ಚಿನ್ನ, ವಜ್ರಗಳ ಟಯೆರಾ ಹಾಕುವ

